# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 156, ಶ್ರೀನಗರ ಬೆಂಗಳೂರು.

ಸಂಖ್ಯೆ: ಸ.ಅ/ವಾ–156//2022–23 ದಿನಾಂಕ: 04-06-2022

### ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21. ದಿನಾಂಕ: 21–09–2020ರ ಆದೇಶದಂತೆ ದಿನಾಂಕ: 04–06–2022 ಶನಿವಾರ ವಾರ್ಡ್ ಸಂಖ್ಯೆ: 156, ಶ್ರೀನಗರ ವಾರ್ಡ್ ಕಛೇರಿಯಲ್ಲಿ ನಡೆದ ಮೇ ತಿಂಗಳ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಶ್ರೀನಗರ,
ಸಮಯ: ಬೆಳಿಗ್ಗೆ 10.30 ಗಂಟೆಗೆ

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಶ್ರೀ. ಹೆಚ್.ವಿ. ಯರ್ರಪ್ಪ ರೆಡ್ಡಿ, (ಕಾ.ಪಾ.ಅ, ಚಿಕ್ಕಪೇಟೆ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ. ವೆಂಕಟಮಳವಯ್ಯ, ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಕವಿತಾ (ಹಿ.ಆ.ಪ) – ಸದಸ್ಯರು
4. ಶ್ರೀ. ರಾಕೇಶ್ – ಸದಸ್ಯರು
5. ಶ್ರೀ. ಬಿ. ರವಿಶಂಕರ್, – ಸದಸ್ಯರು
6. ಶ್ರೀ. ಜೆ.ಕೆ. ಕೃಷ್ಣ – ಸದಸ್ಯರು
7. ಶ್ರೀ. ಪ್ರಕಾಶ್ – ಎ.ಎಸ್.ಐ (ಬ.ಗು)
8. ಶ್ರೀ. ಹನುಮಂತಪ್ಪ. ಬಿ – ಸದಸ್ಯರು
9. ಶ್ರೀಮತಿ. ಮೀನಾ. ಆರ್ – (ಕಿ.ಆ.ಪ)
10. ಶ್ರೀಮತಿ.ಜಿ. ಸೌಮ್ಯ – ಸದಸ್ಯರು
11. ಶ್ರೀ. ತೇಜಸ್ – ಸದಸ್ಯರು
12. ಶ್ರೀ. ಪ್ರಮೋದ್ – ಸದಸ್ಯರು
13. ಶ್ರೀ. ಮಂಜುನಾಥ್– ಬಿ.ಡಬ್ಲ್ಯೂ.ಎಸ್.ಎಸ್.ಬಿ
14. ಶ್ರೀ. ಎಸ್. ನರಸಿಂಹಮೂರ್ತಿ– ಸದಸ್ಯರು

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ. 156 ರ ನೋಡೆಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕ್ಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1) ರಾಘವೇಂದ್ರ ಮಠದ ಎದುರು ಬೀದಿದೀಪ ಸರಿಪಡಿಸಲು ಸಭೆಯಲ್ಲಿ ಸೂಚಿಸಲಾಗಿದೆ.

2) ಕಾಳಿದಾಸ ವೃತ್ತದಲ್ಲಿ ಬೀದಿ ದೀಪ ದುರಸ್ಥಿಪಡಿಸಲು ಸೂಚಿಸಲಾಗಿದೆ.

3) ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ರಸ್ತೆ ಕತ್ತರಿಸಿದ ಕೂಡಲೆ ದುರಸ್ಥಿಪಡಿಸಲು ಸೂಚಿಸಲಾಗಿದೆ ಮತ್ತು ಮರದ ಕೊಂಬೆಗಳನ್ನು ಕತ್ತರಿಸಿದ ಮೇಲೆ ಅವುಗಳನ್ನು ಅಲ್ಲೇ ಬಿಡದೆ ಬೇರೆಕಡೆಗೆ ತೆಗೆದುಕೊಂಡು ಹೋಗಲು ಸೂಚಿಸಲಾಗಿದೆ.

4) ರಸ್ತೆ ಬದಿಯ ಚರಂಡಿಗಳಲ್ಲಿ ಸಿಲ್ಟ್ ತೆಗೆದಕೂಡಲೇ ರಸ್ತೆಯಲ್ಲಿ ಹೆಚ್ಚಿನ ಕಾಲ ಬಿಡದೆ ಕೂಡಲೇ ತೆರವುಗೊಳಿಸಲು ಸೂಚಿಸಲಾಗಿದೆ.

5) ವಿವೇಕಾನಂದ ಶಾಲೆಯ ಎದುರುಗಡೆ ರಾತ್ರಿವೇಳೆ ಗುಂಪಾಗಿ ಜನರು ಸೇರಿ ಗಲಾಟೆ ಮಾಡುತ್ತಿರುವುದನ್ನು ತಪ್ಪಿಸಲು ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಗೆ ಸೂಚಿಸಲಾಗಿದೆ.

6) ಮದ್ದೂರಮ್ಮ ದೇವಸ್ಥಾನ ಮತ್ತು ಕಾಳಿದಾಸ ವೃತ್ತದಲ್ಲಿ ವಾಹನ ನಿಲುಗಡೆಯನ್ನು ತಪ್ಪಿಸಲು ಸೂಚಿಸಲಾಗಿದೆ.

7) ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸದಂತೆ ತಡೆಯಲು ಸಭೆಯಲ್ಲಿ ಸೂಚಿಸಲಾಗಿದೆ.

8) ಶ್ರೀನಗರದ 6ನೇ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ದುರಸ್ಥಿಪಡಿಸಲು ಸೂಚಿಸಲಾಗಿದೆ ಮತ್ತು ಮ್ಯಾನ್‌ಹೋಲ್‌ಗಳ ರಸ್ತೆಯ ಮೇಲ್ಭಾಗಕ್ಕೆ ಮತ್ತು ರಸ್ತೆಯ ಕೆಳಭಾಗಕ್ಕೆ ಇರದ ರಸ್ತೆಗೆ ಸಮನಾಂತರವಾಗಿ ಇರುವಂತೆ ಸೂಚಿಸಲಾಗಿದೆ.

9) ಕೋವಿಡ್-19 ಬೂಸ್ಟರ್ ಡೋಸ್ ಹಾಕಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

10) ವಾರ್ಡ್‌ನ ಬೀದಿಗಳಲ್ಲಿ ನೀರು ನಿಂತಿರುವ ಕಡೆ ಸೊಳ್ಳೆ ಔಷದವನ್ನು ಸಿಂಪಡಿಸಲು ಸೂಚಿಸಲಾಗಿದೆ.

11) ಟೆನಿಸ್ ಆಟದ ಮೈದಾನದಲ್ಲಿ ಶುಲ್ಕ ಸಂಗ್ರಹಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

12) ಬ್ಲಾಕ್ ಸ್ಪಾಟ್‌ಗಳಿರುವ ಮದ್ದೂರಮ್ಮ ದೇವಸ್ಥಾನ, ಸಮುದಾಯಭವನ ಆವಲಹಳ್ಳಿ ಮುಖ್ಯರಸ್ತೆಯಲ್ಲಿ ಕಸ ಸಂಗ್ರಹಿಸದ ಹಾಗೆ ನೋಡಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿದೆ.

13) ಇಂದಿರಾ ಮೊಬೈಲ್ ಕ್ಯಾಂಟೀನ್ ನಿರ್ವಹಣೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

14) ವಾರ್ಡ್ ಕಛೇರಿಯಲ್ಲಿ ಹೊಲಿಗೆ ತರಬೇತಿ ಕೇಂದ್ರ ನಡೆಯದೇ ಇರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 156, ಶ್ರೀನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 156, ಶ್ರೀನಗರ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್.ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.